ಶ್ರೀ ಎಂ. ಮಲ್ಲಿಕಾರ್ಜುನಪ್ಪಗೌಡರು.—ಳ ವರ್ಷಗಳಿಂದ...

ಅಧ್ಯಕ್ಷರು.—ಎಲ್ಲರ ಹಿತದೃಷ್ಟಿಯಿಂದ, ಸದನದ ಗೌರವದ ದೃಷ್ಟಿಯಿಂದ ಇದನ್ನು ಮುಂದು ಪರಿಸುವುದು ಬೇಡ. ಈ ವಿಷಯ ಮುಂಕ್ಯಾಯವಾಗಿದೆ. ಮುಂದಿನ ವಿಷಯ ಗಮನ ಸೆಳೆಯುವುದು. ಮಾನ್ಯ ದೊಡ್ಡಮೇಟಿಯವರೇ, ಕೇಳಿ.

ಅಧ್ಯಕ್ಷರು.—ಈಗ ಮಾನ್ಯ ದೊಡ್ಡ ಮೇಟಿಯವರೇ, ನೀವು ಕಾಲಿಂಗ್ ಅಟೆನ್‌ಷನ್ ಕೇಳಿ. ಗಮನ ಸೆಳೆಯಿರಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇದು ಮುಂಖ್ಯವಾದ ವಿಚಾರ. ಇದು ತುಮಕೂರಿಗೂ ಹರಡಿದೆ ಬೇರೆ ಕಡೆಗೂ ಹರಡುತ್ತಿದೆ. ಅನೇಕ ವಿಷಯಗಳು ಹೊರಗೆ ಬರುತ್ತವೆ. ಕಾಂಗ್ರೆಸ್ಸಿನವರು ಕಮ್ಯುನಿಸ್ಟ್‌ನವರು, ಜನತಾದವರು...

ಅಧ್ಯಕ್ಷರು.—ಆಗುವುದಿಲ್ಲ. ಮಾನ್ಯ ದೊಡ್ಡ ಮೇಟಿಯವರೇ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೆ...

ಅಧ್ಯಕ್ಷರು.—ಆ ವಿಷಯ ಮುಂಕ್ಯಾಯವಾಗಿದೆ. ದಯವಿಟ್ಟು ನೀವು ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರು ಅನೇಕ ಅಲಿಗೇಷನ್ಸ್ ಮಾಡಿದ್ದಾರೆ. ಅದೆಲ್ಲಾ ಹೊರಗೆ ಬರಲಿ. ಯಾರುಯಾರು ಏನೇನು ಮಾಡಿದ್ದಾರೆ ಹೊರಗೆ ಬರಲಿ.

ಅಧ್ಯಕ್ಷರು.—ಆ ವಿಷಯ ಮುಂಕ್ಯಾಯ ಮಾಡಿದ್ದೇನೆ. ಈಗ ದೊಡ್ಡಮೇಟಿಯವರ ಕಾಲಿಂಗ್ ಅಟೆನ್‌ಷನ್.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಹೀಗೆ ಮುಂಕ್ಯಾಯ ಮಾಡಿ ಮಾಡಿ ನಮ್ಮನ್ನೇ ಮುಂಕ್ಯಾಯ ಮಾಡುತ್ತೀರಿ.

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೇ, ಇದು ಬಹಳ ಮುಂಖ್ಯವಾದ ವಿಷಯ ಇದೆ. (ಕೈಯಲ್ಲಿ ಪತ್ರಿಕೆ ಯನ್ನು ಹಿಡಿದು ತೋರಿಸುತ್ತಾ ಹೇಳಿದರು.)

ಅಧ್ಯಕ್ಷರು.—ಅದನ್ನು ಕಳುಹಿಸಿ ನೋಡುತ್ತೇನೆ.

2: ಗದಗ್ ಬಸ್ ನಿಲ್ದಾಣದಲ್ಲಿ ಧಾರವಾಡ ಜಿಲ್ಲಾ ಪರಿಷತ್ ಸದಸ್ಯ ಸೋಮಣ್ಣ ಹಲ್ಕಾಪುರ ಇವರ ಮೇಲೆ ಪೋಲೀಸರು ನಡೆಸಿದ ಹಲ್ಲೆಯ ಬಗ್ಗೆ.

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೆ, ದಿನಾಂಕ ೪-೪-೧೯೮೮ರಂದು ರಾತ್ರಿ ೩೦ ಗಂಟೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಗದಗ ಬಸ್ ನಿಲ್ದಾಣದಲ್ಲಿ ಧಾರವಾಡ ಜಿಲ್ಲಾ ಪರಿಷತ್ ಸದಸ್ಯ ಶ್ರೀ ಸೋಮಣ್ಣ ಹಲ್ಕಾಪುರ ಹಾಗೂ ಪ್ರಯಾಣಿಕರ ಮೇಲೆ ಪೋಲೀಸ್ ಸಬ್-ಇನ್ಸ್‌ಪೆಕ್ಟರ್ ಮತ್ತು ಪೋಲೀಸರು ನಡೆಸಿದ ಹಲ್ಲೆಯ ಬಗ್ಗೆ ಮಾನ್ಯ ಮುಂಖ್ಯಮಂತ್ರಿಯವರ ಗಮನವನ್ನು ಸೆಳೆಯಬಂತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ).—

ದಿನಾಂಕ ೪-೪-೧೯೮೮ರಂದು ಶ್ರೀ ತೋಟಬದಾರ್ಯಸ್ವಾಮಿಗಳ ಮಾಠದ ಜಾತ್ರೆಯು ಗದಗ್ ನಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಅಕ್ಕಪಕ್ಕದ ಹಳ್ಳಿಗಳಿಂದ ಸುಮಾರು ೩೦ ೦೦೦ ಜನರು ಬಂದಿದ್ದರು. ಜಾತ್ರೆ ಮುಗಿದ ನಂತರ, ಅವರುಗಳು ತಮ್ಮ ತಮ್ಮ ಸ್ಥಳಗಳಿಗೆ ವಾಪಸ್ಸು ಹೋಗುವ ಆತುರದಲ್ಲಿ, ಕೆ.ಎಸ್.ಆರ್.ಟಿ.ಸಿ. ಬಸ್ಸುಗಳಲ್ಲಿ ಸ್ಥಳಾವಕಾಶವಿಲ್ಲದಿದ್ದುದರಿಂದ ಅದರ ಮೇಲ್ಬಾಗದಲ್ಲೂ ಸಹ ಕುಳಿತಿದ್ದರು.

ಹೊಳೆ ಆಲೂರು ಹಳ್ಳಿಗೆ ಹೋಗುವ ಬಸ್ಸಿನ ಮೇಲೂ ಸಹ ಪ್ರಯಾಣಿಕರು ಕುಳಿತಿದ್ದರು. ಆ ಮಾರ್ಗದ ಚಾಲಕ ಮತ್ತು ನಿರ್ವಾಹಕರು ಪ್ರಯಾಣಿಕರಿಗಾಗಿ ಸಾಗಿಸಲು ಹೆಚ್ಚಿನ ಬಸ್ಸುಗಳನ್ನು ಕಳುಹಿಸಿ ಕೊಡುವಂತೆ ಡಿಪೋ ಮ್ಯಾನೇಜರ್‌ನ್ನು ವಿನಂತಿಸಿಕೊಳ್ಳುವುದಾಗಿ ಭರವಸೆಯನ್ನು ಕೊಟ್ಟರು. ಆದರೆ

ಆ ಬಸ್ಸಿನ ಮೇಲೆ ಇದ್ದ ಪ್ರಯಾಣಿಕರು ಅದೇ ಬಸ್ಸಿನಲ್ಲಿ ಪ್ರಯಾಣಿಸುತ್ತೇವೆ ಎಂದು ಒತ್ತಾಯಿಸಿದಾಗ ಚಾಲಕ ಮತ್ತು ನಿರ್ವಾಹಕರು ಬಸ್ಸನ್ನು ಓಡಿಸಲು ನಿರಾಕರಿಸಿದರು ಪ್ರಯಾಣಿಕರಿಗೂ, ಚಾಲಕ–ನಿರ್ವಾಹಕರಿಗೂ ಮಾತು ಬೆಳೆಯಿತು. ಈ ಸಂದರ್ಭದಲ್ಲಿ ರೋಣ ತಾಲ್ಲೂಕಿನ ಹೆಬ್ಬಗೇರಿಯ ಜಿಲ್ಲಾ ಪರಿಷತ್ ಸದಸ್ಯರಾದ ಶ್ರೀಯುತ ಸೋಮಣ್ಣ. ಬಸಪ್ಪ ಹರ್ಲಾಪುರ ಹಾಗೂ ೩೦–೪೦ ಪ್ರಯಾಣಿಕರು ಬಸ್ ನಿಲ್ದಾಣದ ಕ್ಯಾಬೀನ್‌ನೊಳಗೆ ಹೋಗಿ ಕೆ.ಎಸ್.ಆರ್.ಟಿ.ಸಿ.ಯ ಟ್ರಾಫಿಕ್ ಕಂಟ್ರೋಲರನ್ನು ಬಸ್ಸುಗಳ ಅವ್ಯವಸ್ಥೆ ಬಗ್ಗೆ ಕೇಳಿಂತಿದ್ದರು, ಅದೇ ಸಮಯದಲ್ಲಿ ಅವರ ಜೊತೆಯಲ್ಲಿದ್ದ ಪ್ರಯಾಣಿಕರು ಕ್ಯಾಬೀನ್ ಅನ್ನು ಅಲುಗಾಡಿಸಲು ಪ್ರಾರಂಭಿಸಿದರು. ಸುದ್ದಿ ತಿಳಿದ ತಕ್ಷಣವೇ ಸ್ಥಳೀಯ ಪೋಲೀಸರು ಸ್ಥಳಕ್ಕೆ ಧಾವಿಸಿ ಗಲಭೆ ಮಾಡುವವರನ್ನು ಶಾಂತಿಯಿಂದ ಇರುವಂತೆ ಕೋರಿದರು. ಜಿಲ್ಲಾ ಪರಿಷತ್ತಿನ ಸದಸ್ಯರಾದ ಶ್ರೀ ಸೋಮಣ್ಣ, ಶ್ರೀ ಹರ್ಲಾಪುರ ಇವರಿಗೂ ಮತ್ತು ಸದರಿ ಸಬ್ ಇನ್ಸ್‌ಪೆಕ್ಟರ್ ರವರಿಗೂ ವಾಗ್ವಿವಾದ ನಡೆದಿತ್ತು. ಆ ಸಮಯದಲ್ಲಿ ಜಿಲ್ಲಾ ಪರಿಷತ್ತಿನ ಸದಸ್ಯರು ಸಬ್ ಇನ್ಸ್‌ಪೆಕ್ಟರ್ ರವರನ್ನು ಅವಾಚ್ಯ ಶಬ್ದಗಳಿಂದ ಬೈದುದಲ್ಲದೆ ಅವರ ಸಮವಸ್ತ್ರವನ್ನು ಹಿಡಿದರು. ಅಲ್ಲಿ ನೆರೆದಿದ್ದ ೩೦೦–೪೦೦ಪ್ರಯಾಣಿಕರು ಬಸ್ಸಿಗೆ ಕಲ್ಲು ತೂರಿದರು ಮತ್ತು ಕೆ.ಎಸ್.ಆರ್.ಟಿ.ಸಿ. ಚಾಲಕರನ್ನು ಹೊಡೆಯಲು ಪ್ರಾರಂಭಿಸಿದರು. ಪರಿಸ್ಥಿತಿಯನ್ನು ಹತೋಟಿಗೆ ತರಲು ಪೋಲೀಸರು ಲಘು ಬೆತ್ತ ಪ್ರಹಾರ ಮಾಡಿದರು. ಅಲ್ಲಿದ್ದ ಜಿಲ್ಲಾ ಪರಿಷತ್ತಿನ ಸದಸ್ಯರಾದ ಶ್ರೀ ಹರ್ಲಾಪುರ ರವರಿಗೆ ಮತ್ತು ೩ ಜನರಿಗೆ ಅಲ್ಪ ಗಾಯಗಳಾಗಿರುತ್ತವೆ. ಶ್ರೀ ಹರ್ಲಾಪುರ ರವರು ಮತ್ತು ಶ್ರೀ ಎಸ್.ಎ. ಹಂಚಿನಾಳ ಇವರು ಸ್ಥಳೀಯ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರು. ಈ ಸಂದರ್ಭದಲ್ಲಿ ೩ ಕೇಸುಗಳನ್ನು ದಾಖಲು ಮಾಡಿಕೊಳ್ಳಲಾಗಿದ್ದು ಅವು ವಿಚಾರಣೆಯಲ್ಲಿರುತ್ತವೆ.

ಗದಗ್‌ನಲ್ಲಿ ನಡೆದ ಗಲಭೆಗಳ ಬಗ್ಗೆ ನಿಷ್ಪಕ್ಷಪಾತ ವಿಚಾರಣೆಯಾಗಬೇಕೆಂಬ ಉದ್ದೇಶದಿಂದ ಅಲ್ಲಿನ ಸಬ್‌ಇನ್ಸ್‌ಪೆಕ್ಟರ್‌ರವರನ್ನು ವರ್ಗ ಮಾಡಲಾಗಿದೆ.

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.— ಮಾನ್ಯ ಅಧ್ಯಕ್ಷರೆ, ಇದು ಎಷ್ಟು ಅಪ್ಪಟ ಸುಳ್ಳು ಅಂದರೆ ಸತ್ಯಕ್ಕೆ ಸಾಧಾರಣ ೧೦೦೦ ಕಿಲೋಮೀಟರ್ ದೂರ ಇಲ್ಲ. ಅಡಿಷನಲ್ ಎಸ್.ಪಿ. ಧಾರವಾಡ ಇವರು ಬಂದು ಸರಿಯಾಗಿ ತನಿಖೆಯನ್ನು ಮಾಡಿಲ್ಲ! ಸ್ಪಷ್ಟ ಅಲ್ಲ ಕೆಲವು ಸಿದ್ಧ ಉಡುಪುಗಳು ಹೇಗಿರುತ್ತವೆಯೋ ಹಾಗೆಯೇ ಸಿದ್ಧ ಸಾಕ್ಷಿಗಳು ಕೆಲವು ಪೋಲೀಸ್ ಇಲಾಖೆಯಲ್ಲಿರುತ್ತವೆ. ಇದೂ ಸಹ ರೆಡಿಮೇಡ್ ಉಡುಪಿನ ತರಹ ಇರುತ್ತವೆ. ಹಾಗೆಯೇ ಸಾಕ್ಷಿಗಳನ್ನು ಪಡೆದುಕೊಂಡಿದ್ದಾರೆ. ಮತ್ತೆ ಅವರ ಮೇಲೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಸಚಿವರಿಗಾಗಲೀ ಸಚಿವೋತ್ತಮರಿಗಾಗಲೀ ರಕ್ಷಣೆ ಇಲ್ಲದೇ ಇದ್ದರೆ ಪೋಲೀಸ್ ಅಧಿಕಾರಿಯನ್ನು ಅಮಾನತ್ತಿನಲ್ಲಿಡುತ್ತಾರೆ, ಇಲ್ಲಿ ಜಿಲ್ಲಾ ಪರಿಷತ್ತಿನ ಗೌರವಾನ್ವಿತ ಸದಸ್ಯ ಶಾಂತಿ ಸಂಧಾನಕ್ಕಾಗಿ ಹೋಗಿದ್ದಾಗ ಆತನನ್ನು ದರದರ ಎಳೆದುಕೊಂಡು ಹೋಗಿ ಹೊಡೆದಿದ್ದಾರೆ. ಆದರೆ ಅಲ್ಪ ಸ್ವಲ್ಪ ಗಾಯವಾಗಿದೆ ಎಂದು ಹೇಳಿದ್ದಾರೆ, ಇಷ್ಟು ಅಪ್ಪಟ ಸುಳ್ಳಿನ ವರದಿಯನ್ನು ಮಂತ್ರಿಗಳು ಏತಕ್ಕೆ ತರಿಸುತ್ತಾರೆ? ಪುನಃ ಇದನ್ನು ತನಿಖೆ ಮಾಡಿಸಬೇಕು. ನಾನು ಕೆ. ಎಚ್. ಪಾಟೀಲರಿಗೂ ಈ ಮಾತನ್ನು ಹೇಳಿದ್ದೇನೆ. ಅವರೂ ಕೂಡ ಈ ಬಗ್ಗೆ ಹೇಳಿದ್ದಾರೆ. ಮಾನ್ಯ ಜಾಲಪ್ಪನವರು ಸಚಿವರಾಗಿದ್ದಾಗ ಕೂಡ ಈ ಮಾತನ್ನು ಹೇಳಿದ್ದೇನೆ. ಕೆ.ಎಸ್.ಆರ್.ಟಿ.ಸಿ. ಬಸ್ಸಿಗೆ ಏನೂ ಆಗಿಲ್ಲ. ಹಿಂದುಗಡೆಯಿಂದ ೪–೬ ಮಂದಿ ಕಲ್ಲು ಒಗೆದಿದ್ದಾರೆ. ಅದು ಬೇರೆ ಸುಮ್ಮ ಸುಮ್ಮನೆ ಸುಳ್ಳು ಸಾಕ್ಷಿಗಳನ್ನು ಸೃಷ್ಟಿಸಿ ಕೇಸು ಹಾಕುವಂತಹ ಪೋಲೀಸ್ ಅಧಿಕಾರಿಗಳು ನಮ್ಮ ಧಾರವಾಡದಲ್ಲಿದ್ದಾರೆ. ಎ.ಎಸ್.ಪಿ, ನಾಗರಾಜ್ ಹಾಗೂ ಗದಗ್‌ನಲ್ಲಿರತಕ್ಕ ಸರ್ಕಲ್ ಇನ್ಸ್‌ಪೆಕ್ಟರ್ ಆಫ್ ಪೋಲೀಸ್ ಇವರಿಗೆ ಬೇರೆ ಉದ್ಯೋಗವೇ ಇಲ್ಲ. ಸರ್ಕಾರ ಕೊಚ್ಚಿರುವಂತಹ ವರದಿಯನ್ನು ನೋಡಿದರೆ ಅದನ್ನು ಹರಿದು ಒಗೆಯುವಷ್ಟು ಬಂದಿದೆ. ಇಂತಹ ವರದಿಯನ್ನು ಏಕೆ ತರಿಸುತ್ತೀರೆಂದು ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ. ಇದರ ಬಗ್ಗೆ ಈ ಹಿಂದೆ ಮೂರು ಪತ್ರಗಳನ್ನು ನಾನು ಬರೆದಿದ್ದೇನೆ. ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಅವರನ್ನು ಬೇರೆ ಕಡೆಗೆ ವರ್ಗ ಮಾಡಲಾಗಿದೆ ಎಂಬುದಾಗಿ ಹೇಳಿದ್ದಾರೆ. ಶಿಕ್ಷೆಯನ್ನು ಕೊಟ್ಟು ವರ್ಗ ಮಾಡಿದ್ದೀರೋ ಅಥವಾ ಹೇಗೆ? ಅವರ ಬಗ್ಗೆ ಎ ಎಸ್ ಪಿ. ಯವರು ಏನು ಹೇಳುತ್ತಾರೆಂದರೆ, ಜಿಲ್ಲಾಪರಿಷತ್ತಿನ ಸದಸ್ಯರು ಮಾಡಿರುವಂತಹ ಆಪಾದನೆಗೂ ಅವರ ವರ್ಗಾವಣೆಗೂ ಯಾವುದೇ ರೀತಿಯ ಸಂಬಂಧವಿಲ್ಲ ಎಂದು ಹೇಳಿದ್ದಾರೆ. ಇದಕ್ಕೂ ಮುಂಚೆ ಮಾಲಗಿತ್ತಿಯವರ ಹೆಸರು ವರ್ಗಾವಣೆ ಪಟ್ಟಿಯಲ್ಲಿದ್ದುದರಿಂದ ಅವರನ್ನು ಬೇರೊಂದು ಸ್ಥಳಕ್ಕೆ ವರ್ಗ ಮಾಡಲಾಗಿದೆ ಎಂಬುದಾಗಿ ಹೇಳಿದ್ದಾರೆ. ಇದನ್ನು ನೋಡಿದರೆ ಅವರಿಗೆ ಶಿಕ್ಷೆ ಕೊಟ್ಟು ವರ್ಗ ಮಾಡಿಲ್ಲವೆಂದು ಕಾಣುತ್ತದೆ.

ಅಧ್ಯಕ್ಷರು.—ಏನಂ ಆಗಬೇಕು? ಅದನ್ನು ಹೇಳಿ?

ಶ್ರೀ ಜ್ಞಾನದೇವ ಎಸ್ ದೊಡ್ಡಮೇಟಿ.—ಏನಾಗಬೇಕು ಅಂದರೆ ಮುನಂ ಚಾರ್ಜಶೀಟಾಗಬೇಕು, ಅವರ ಬಗ್ಗೆ ಗುಪ್ತ ವರದಿ ಏನು ಬಂದಿದೆ ಅದನ್ನು ಹೇಳಲಿ. ಅಡಿಷನಲ್ ಎಸ್. ಪಿ. ಯವರಿಂದ ತರಿಸಿಕೊಂಡ ವರದಿ ಇರಲಿ. ಇವರ ಗುಪ್ತ ವರದಿ ಏನು ಬಂದಿದೆ ಅದನ್ನು ಹೇಳಬೇಕಂ. ಮತ್ತೆ ಇವರನ್ನು ಅಮಾನತ್ತಿನಲ್ಲಿಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್ ಸಿಂಧ್ಯ.—ಮಾನ್ಯ ಅಧ್ಯಕ್ಷರೆ. ಮಾನ್ಯ ಸದಸ್ಯರ ಭಾವನೆಗಳಂ ಸರ್ಕಾರದ ಗಮನಕ್ಕೆ ಬಂದಿದೆ. ಅವರ ಭಾವನೆಗಳೇನು ಎಂಬುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಇದರಲ್ಲಿ ಸ್ವಲ್ಪ ಎಡವಿರಬಹುದು. ಇಲ್ಲ ಎಂದು ಹೇಳುವುದಿಲ್ಲ. ಇದರ ಬಗ್ಗೆ ಸರಿಯಾದ ವಿಚಾರಣೆಯನ್ನು ನಡೆಸಿ ಅವರಿಂದ ವರದಿಯನ್ನು ತರಿಸಿಕೊಂಡು ಯಾರು ತಪ್ಪಿತಸ್ಥರೆಂದು ಕಂಡು ಬರುತ್ತಾರೋ ಅವರ ತಪ್ಪಿಗನುಗುಣವಾಗಿ ಶಿಕ್ಷೆ ಕೊಡಲಾಗುವುದಂ.

ಶ್ರೀ ಯು. ಭೂಪತಿ.—ನೀವು ಕೊಟ್ಟಂತಹ ಮಾಹಿತಿ ಸಂಪೂರ್ಣ ಸುಳ್ಳು ಎಂದು ಮಾನ್ಯ ಸದಸ್ಯರಂ ಹೇಳಂತ್ತಿದ್ದಾರೆ ಅದಕ್ಕೆ ಏನು ಹೇಳಂತ್ತೀರಿ?

ಶ್ರೀ ಜ್ಞಾನದೇವ ಎಸ್ ದೊಡ್ಡಮೇಟಿ.—ಇವರು ಅಲ್ಲಿಗೆ ಬಂದು ೬ ವರ್ಷಗಳಾಗಿವೆ. ಅನೇಕ ರಾಜಕೀಯ ವ್ಯಕ್ತಿಗಳನ್ನು ಹಿಂದುಗಡೆ ಮಾಗೂ ಮುಂದುಗಡೆ ಇಟ್ಟುಕೊಂಡು ಬರೀ ಇದನ್ನೇ ಮಾಡುತ್ತಿದ್ದಾರೆ. ವಿಚಾರಣೆಯನ್ನು ಮಾಡಿಸಿ ತಪ್ಪಿತಸ್ಥರನ್ನು ಹುಡುಕಿಸಂತ್ತಾರಂತೆ. ಯಾವ ರೀತಿ ಹುಡುಕಿಸುತ್ತೀರಿ? ಮಾನ್ಯ ಮಂತ್ರಿಗಳು ಇದರ ಬಗ್ಗೆ ಮುನಂ ತನಿಖೆಯಂನ್ನು ಮಾಡಿಸುತ್ತೇನೆಂದು ಹೇಳಿದ್ದಾರೆ ಈಗಾಗಲೇ ಸುಳ್ಳು ಸಾಕ್ಷಿಗಳನ್ನು ಸೃಷ್ಟಿಸಿಕೊಂಡು ಕೇಸನ್ನು ದಾಖಲು ಮಾಡಿಕೊಂಡಿದ್ದಾರೆ. ಜಿಲ್ಲಾ ಪರಿಷತ್ತಿನ ಸದಸ್ಯರೊಬ್ಬರ ಮೇಲೆ ಅಟೆಂಮ್ಟ್-ಟು-ಮರ್ಡರ್ ಎಂಬುದಾಗಿ ಕೇಸನ್ನು ದಾಖಲು ಮಾಡಿದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅವರ ಭಾವನೆಗಳನ್ನು ಅರ್ಥಮಾಡಿಕೊಂಡಿದ್ದೇನೆ. ಆವೇಶದಿಂದ

ಶ್ರೀ ಯು. ಭೂಪತಿ.—ನೀವು ಹೇಳಿರುವಂಥಹದ್ದು ಸುಳ್ಳು ಎಂದು ಮಾನ್ಯ ಸದಸ್ಯರು ಹೇಳಂತ್ತಿದ್ದಾರೆ. ನೀವು ಉತ್ತರ ಕೊಟ್ಟಿರುವಂಥದ್ದು ಸತ್ಯಕ್ಕೆ ಸಾವಿರ ಕಿಲೋಮೀಟರ್ ದೂರದಲ್ಲಿದೆ ಎಂದು ಹೇಳಿದ್ದಾರೆ. ಇದನ್ನು ನೋಡಿದರೆ You are misleading the House ಎಂದು ಅರ್ಥವಾಗುವುದಿಲ್ಲವೆ? ಅದಕ್ಕೆ ಏನು ಹೇಳುತ್ತೀರಿ? ಇದಕ್ಕೆ ಏನಾದರೂ ಸಮಾಧಾನ ಹೇಳಬೇಕಲ್ಲ.

SRI P. G. R. SINDHIA.—Let me give the reply first.

ಅಧ್ಯಕ್ಷರು.—ನೀವು ಏಕೆ ಅವರ ಪರವಾಗಿ ವಕಾಲತ್ತು ವಹಿಸುತ್ತಿದ್ದೀರಿ? ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಯು. ಭೂಪತಿ.—ಇದೊಂದು ಸೀರಿಯಸ್ ಮ್ಯಾಟರ್. ಮಾನ್ಯ ಮಂತ್ರಿಗಳು ಏನಂ ಏನು ಹೇಳಿದ್ದಾರೆ. ಅದು ಸಂಪೂರ್ಣ ಸುಳ್ಳು ಎಂಬುದಾಗಿ ಮಾನ್ಯ ಸದಸ್ಯರು ಹೇಳಿದ್ದಾರೆ. That itself indicates that Minister is misleading the House ಎಂಬುದಾಗಿ ಅರ್ಥವಾಗುವುದಿಲ್ಲವೆ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಸದಸ್ಯ ಮಿತ್ರರಿಗೆ ಈ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಸದಸ್ಯರಾದ ದೊಡ್ಡಮೇಟಿಯವರು ರೂಲ್ ೭೪ರ ಕೆಳಗೆ ಕಳಂಹಿಸಿದಂತಹ ಸೂಚನೆಯ ಬಗ್ಗೆ ಸರ್ಕಾರದ ಪರವಾಗಿ ಸಮಜಾಯಿಸಿ ಕೊಡತಕ್ಕಂತಹ ಸಂದರ್ಭದಲ್ಲಿ ಉತ್ತರ ಕೊಡುವುದಕ್ಕೇ ಅಡ್ಡಿಯನ್ನುಂಟು ಮಾಡಿದರೆ ನಾನು ಹೇಗೆ ಉತ್ತರ ಕೊಡುವುದಕ್ಕಾಗುತ್ತದೆ? You have no patience to hear me. Please have some patience. ಶ್ರೀಮಾನ್ ದೊಡ್ಡಮೇಟಿಯವರು ಹೇಳಿರತಕ್ಕ ಮಾತು, ಅದರ ಹಿಂದೆ ಇರತಕ್ಕ ಅವರ ಭಾವನೆಗಳು ಸರ್ಕಾರಕ್ಕೆ ಅರ್ಥವಾಗಿದೆ. ಅವರು ಮಾತನಾಡತಕ್ಕ ಕಾಲದಲ್ಲಿ ಈ ಉತ್ತರ ಸತ್ಯಕ್ಕೆ ಬಾಳ ದೂರ ಇದೆ ಎಂಬುದನ್ನು ತಿಳಿಸಿದ್ದಾರೆ. ಸಾಮಾನ್ಯವಾಗಿ ಅವರು ಯಾವಾಗಲೂ ಈ ರೀತಿಯಾಗಿ ಮಾತನಾಡತಕ್ಕ ಸದಸ್ಯರಲ್ಲ. ಈ ವರದಿಯಿಂದ ಅವರಿಗೆ ನಿಸ್ಪಕ್ಷಪಾತವಾದ ವಿಚಾರಣೆ

ಸರಿಯಾಗಿ ನಡೆದಿಲ್ಲವೆಂಬಂದು ಅವರ ಭಾವನೆಯಾಗಿದೆ. ನಾನು ಅವರಿಗೆ ಆಶ್ವಾಸನೆ ಕೊಡುತ್ತೇನೆ. ಇದರ ಬಗ್ಗೆ ಬೆಳಗಾವಿ ವಿಭಾಗದ ಡಿ.ಐ.ಜಿ. ಯವರ ಮೂಲಕ ನಿಷ್ಪಕ್ಷಪಾತವಾದ ವಿಚಾರಣೆಯನ್ನು ನಡೆಸಿ ಯಾರು ತಪ್ಪಿತಸ್ಥರು ಇದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ — ಮಾನ್ಯ ಅಧ್ಯಕ್ಷರೇ, ಆ ಪೋಲೀಸರನ್ನು ಶಿಕ್ಷೆ ಮಾಡಿ ವರ್ಗ ಮಾಡಿಲ್ಲ. ಹೆಚ್ಚಿನ ಒಂದು ದೊಡ್ಡ ಪೋಲೀಸ್ ಸ್ಟೇಷನ್‌ಗೆ ವರ್ಗ ಮಾಡಿರುವುದರಿಂದ ಅವರಿಗೆ ಭಡ್ತಿಯನ್ನು ಕೊಟ್ಟ ಹಾಗೆ ಆಯಿತು ಎಂದು ಕಾಣುತ್ತದೆ. ಈಗಾಗಲೇ ಅವರು ಭಡ್ತಿಯ ಹಾದಿಯಲ್ಲಿ ಇರುವುದರಿಂದ ಅವರಿಗೆ ಆ ಭಡ್ತಿಯನ್ನು ತಡೆಯಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಅದು ಅವರಿಗೆ ಭಡ್ತಿ ಅಲ್ಲ. ಕೇವಲ ಅವರಿಗೆ ಟ್ರಾನ್ಸ್‌ಫರ್ ಆಗಿದೆ. ಅದನ್ನೇ ನಾನು ಹೇಳಿದ್ದೇನೆ. ನಿಮ್ಮ ಭಾವನೆ ಸರ್ಕಾರಕ್ಕೆ ಅರ್ಥ ಆಗಿದೆ. ಈ ಬಗ್ಗೆ ಸೂಕ್ತವಾದ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

(3) ಪುತ್ತೂರು ತಾಲ್ಲೂಕಿನ ನೆಟ್ಟಣ ಎಂಬಲ್ಲಿ ಇಂಡಿಯನ್ ಪ್ಲೈವುಡ್ ಮ್ಯಾನುಫ್ಯಾಕ್ಚರಿಂಗ್ ಕಂಪೆನಿಯ ಕಾರ್ಮಿಕರು ಮುಷ್ಕರ ಹೂಡಿದ್ದರೂ ಸರ್ಕಾರ ಯಾವುದೇ ಕ್ರಮ ಕೈಗೊಳ್ಳದಿರುವುದರ ಬಗ್ಗೆ

ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಅಧ್ಯಕ್ಷರೇ, ಪುತ್ತೂರು ತಾಲ್ಲೂಕಿನ ನೆಟ್ಟಣ ಎಂಬಲ್ಲಿ ಇಂಡಿಯನ್ ಪ್ಲೈವುಡ್ ತಯಾರಿಕರ ಕಂಪನಿಯ ಕಾರ್ಮಿಕರು ಮುಷ್ಕರ ಹೂಡಿದ್ದು ಸರ್ಕಾರ ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದಿರುವುದರ ಬಗ್ಗೆ ಮಾನ್ಯ ಕಾರ್ಮಿಕ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಕೆ. ಕಾಂತ (ಕಾರ್ಮಿಕ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ನಾನು ಈ ಕೆಳಕಂಡ ಹೇಳಿಕೆಯನ್ನು ಕೊಡಬಯಸುತ್ತೇನೆ.

ಇಂಡಿಯನ್ ಪ್ಲೈವುಡ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ ನೆಟ್ಟಣ ಇಲ್ಲಿ ಒಟ್ಟು ೧೬೦ ಜನ ಕೆಲಸಗಾರರು ಕೆಲಸ ಮಾಡುತ್ತಿದ್ದು ಅವರಲ್ಲಿ ೨೩ ಜನ ಕಂಟ್ರಾಕ್ಟ್ ಕೆಲಸಗಾರರು ಇದ್ದಾರೆ. ಈ ೨೩ ಜನರು ಕಂಟ್ರಾಕ್ಟ್ ಕೆಲಸಗಾರರು, ಕಂಟ್ರಾಕ್ಟರುಗಳಾದ ಶ್ರೀ ಅಹಮದ್ ಕುಂಞಿ, ಶ್ರೀ ಕಮ್ಮ, ಶ್ರೀಮತಿ ನಾಗಮ್ಮ ಕೊಂಡರೆಡ್ಡಿ ಇವರ ಕೈಕೆಳಗೆ ಕೆಲಸ ಮಾಡುತ್ತಿದ್ದಾರೆ. ಈ ಕಂಟ್ರಾಕ್ಟ್ ಕೆಲಸಗಾರರು, ಖಾಯಂ ಕೆಲಸಗಾರರಿಗೆ ಸಿಗುವ ಸಂಬಳ, ರಜೆ, ಬೋನಸ್ ಇತ್ಯಾದಿ ಸಿಗಬೇಕೆಂದು ಬೇಡಿಕೆ ಹೂಡಿ ದಿನಾಂಕ ೪-೪-೮೮ ರಿಂದ ಮುಷ್ಕರ ಹೂಡಿದ್ದಾರೆ.

ಈ ಬಗ್ಗೆ ತಕ್ಷಣ ಮಧ್ಯೆ ಪ್ರವೇಶಿಸಿ ಸಂಧಾನ ಪ್ರಯತ್ನಗಳನ್ನು ನಡೆಸಲಾಗಿದೆ. ಮುಷ್ಕರ ಪ್ರಾರಂಭವಾಗಿದ್ದರಿಂದ ವಿಷಯವನ್ನು ಸಂಧಾನಕ್ಕೆ ತೆಗೆದುಕೊಳ್ಳಬೇಕಾಯಿತು. ಮಂಗಳೂರಿನ ಸಹಾಯಕ ಕಾರ್ಮಿಕ ಆಯುಕ್ತರು ದಿನಾಂಕ ೪-೪-೮೮, ೭-೪-೮೮, ೨೧-೪-೮೮, ೨೭-೪-೮೮ ಮತ್ತು ೩೦-೪-೮೮ ರಂದು ಸಂಧಾನ ಸಭೆಗಳನ್ನು ನಡೆಸಿ ಮಾತುಕತೆ ನಡೆಸಿದ್ದಾರೆ.

ಈ ಬಗ್ಗೆ ಎರಡೂ ಪಕ್ಷಗಳ ನಡುವೆ ವಿವಾದ ಇರುವುದರಿಂದ ಮತ್ತು ಸಂಧಾನ ಪ್ರಯತ್ನ ಸಫಲವಾಗದೆ ಹೋದುದರಿಂದ, ಸಂಧಾನಾಧಿಕಾರಿಗಳು ವರದಿಯನ್ನು ದಿನಾಂಕ ೫-೫-೮೮ ರಂದು ಸರ್ಕಾರಕ್ಕೆ ಕಳುಹಿಸಿದ್ದಾರೆ. ಅದರ ಪ್ರಕಾರ ವಿವಾದದ ವಿಷಯವನ್ನು ನ್ಯಾಯ ಪಂಚಾಯಿತಿಗೆ ಒಪ್ಪಿಸುವ ಬಗ್ಗೆ ಪರಿಶೀಲನೆಯಲ್ಲಿದೆ.

ಈಗ ಕೆಲಸಗಾರರು ಮುಷ್ಕರದಲ್ಲಿರುವುದರಿಂದ, ಪೂರ್ಣ ಪರಿಶೀಲನೆಯನ್ನು ಕೆಲಸ ಪ್ರಾರಂಭವಾದ ಮೇಲೆ ಮಾಡಬೇಕಾಗುತ್ತದೆ. ಆದ್ದರಿಂದ ಕೆಲಸ ಪ್ರಾರಂಭವಾದ ಮೇಲೆ ಈ ಬಗ್ಗೆ ಪೂರ್ಣ ಪರಿಶೀಲನೆ ನಡೆಸಿ ಕಂಟ್ರಾಕ್ಟ್ ಕೆಲಸಗಾರರ ಕಾನೂನಿನ ಉಲ್ಲಂಘನೆಗಳು ಇದ್ದಲ್ಲಿ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲಾಗುವುದು.